ವಜ್ರ ಅಪಹರಿಸಿ, ಮತ್ತೆ ಪೆಟ್ಟಿಗೆಯನ್ನು ಸ್ವಸ್ಥಾನದಲ್ಲಿರಿಸುವುದು ಕಷ್ಟ ಅಂತ ನನ್ನ ಅನಿಸಿಕೆ. ಏನು ಮಾಡುವುದೆಂದು ತೋಚದೆ, ನಿಮ್ಮಲ್ಲಿಗೆ ಬಂದಿದ್ದೇನೆ."

"ಆದರೆ, ನೀವಿಲ್ಲಿಗೆ ಬಂದಾಗ, ಕಳ್ಳ ಅಲ್ಲಿ ಆರಾಮವಾಗಿ ವಜ್ರ ಕದಿಯಬಹುದಲ್ಲ!"

"ಬರುವಾಗ ನಾನು ಮಲಗುವ ಕೋಣೆಗೆ ಬೀಗ ಹಾಕಿಯೇ ಬಂದಿದ್ದೇನೆ. ನನ್ನ ಮೊಮ್ಮಗ ಬಲು ತುಂಟ. ಅದಿಕ್ಕೇ ನಾನು ಹೊರಗೆ ಹೋಗುವಾಗೆಲ್ಲಾ, ರೂಮಿಗೆ ಬೀಗ ಹಾಕಿಯೇ ಹೋಗುವುದು. ಹಾಗಾಗಿ ಕಳ್ಳನಿಗೆ, ಕೀಲಿ ಕೈ ಕದ್ದಿದ್ದು ನನಗೆ ಗೊತ್ತಾಗಿರಬಹುದೆಂಬ ಅನುಮಾನ ಬರಲಿಕ್ಕಿಲ್ಲ."

"ನೀವು ನಮ್ಮಿಂದ ಏನು ಸಹಾಯ ನಿರೀಕ್ಷಿಸುತ್ತಾ ಇದ್ದೀರಿ?" ಕರಮಚಂದ ವಿಚಾರಿಸಿದ.

"ಅದನ್ನು ಕದ್ದಿದ್ದು ಯಾರೆಂಬುದನ್ನು ಪತ್ತೆ ಮಾಡಬೇಕು. ಆದರೆ, ಒಂದು ಷರತ್ತು. ನೀವು ಕಳ್ಳನ ಪತ್ತೆಗಾಗಿ ಬಂದಿದ್ದೀರೆಂಬುದು ಯಾರಿಗೂ ಗೊತ್ತಾಗಬಾರದು. ಆ ವಜ್ರಗಳ ಬಗ್ಗೆ ಎಲ್ಲರಿಗೂ ಗೊತ್ತಾಗಬಾರದು ಎನ್ನುವ ಉದ್ದೇಶ. ನಮ್ಮ ಮನೆಯಲ್ಲಿ ಒಬ್ಬರನ್ನು ಕಂಡರೆ ಇನ್ನೊಬ್ಬರಿಗಾಗದು. ಅಣ್ಣ ತಮ್ಮಂದಿರ ನಡುವೆ ಜಗಳವಿದೆ. ಅವರ ಹೆಂಡಂದಿರಿಗಿಬ್ಬರಿಗೂ ಅಷ್ಟಕಷ್ಟೆ. ಪೊನ್ನುವಿನ ಪ್ರಪಂಚವೇ ಬೇರೆ. ಈಗ ಕೀಲಿ ಕೈ ಕದ್ದವನು ಅದನ್ನು ಇನ್ನೊಬ್ಬರಿಗೆ ಹೇಳುವ ಸಾಧ್ಯತೆ ಕಡಿಮೆ. ಕಳ್ಳನಿಂದ ಕೀಲಿ ಕೈ ವಾಪಸು ಪಡಕೊಂಡರೆ, ವಜ್ರವಿರುವುದು ಯಾರಿಗೂ ಗೊತ್ತಾಗದು. ಮತ್ತು ನನ್ನಲ್ಲಿ ಹೆಚ್ಚು ಸಮಯವಿಲ್ಲ. ನಾನು ಕೋಣೆಯಲ್ಲಿಲ್ಲದ ಹೊತ್ತು, ಆ ವಜ್ರಗಳು ಕಳ್ಳನಿಗೆ ಸುಲಭದ ತುತ್ತು. ಹಾಗೆಂದು, ನಾನು ಕೋಣೆಗೆ ಸದಾ ಬೀಗ ಹಾಕಿಡುವಂತೆಯೂ ಇಲ್ಲ. ಅದು ಇಲ್ಲದ ಅನುಮಾನಕ್ಕೆ ಎಡೆ ಮಾಡಿಕೊಡುತ್ತೆ. ನನಗೆ ಸಹಾಯ ಮಾಡಲು ನಿಮ್ಮಿಂದ ಸಾಧ್ಯವೇ?"

ಇದೊಂದು ಅಪರೂಪದ ಪ್ರಕರಣ ಎಂದು ಅದಕ್ಕೇ ನಾನು ಹೇಳಿದ್ದು. ತನಿಖೆಗೆ ಬಂದಿದ್ದು ಗೊತ್ತೇ ಆಗದಂತೆ ತನಿಖೆ ಮಾಡುವುದು!

"ಅಂದರೆ, ಕಳ್ಳನಿಂದ ಕೀಲಿ ಕೈ ಕದಿಯುವುದು!" ಕರಮಚಂದ ಉದ್ಗಾರ ತೆಗೆದ.

"ಸರಿಯಾಗಿ ಹೇಳಿದ್ರಿ. ಈಗ ಕಳ್ಳನಿಗೆ ವಜ್ರಗಳಿರುವ ವಿಷ್ಯ ಗೊತ್ತಿರೋದು ಸಾಧ್ಯವಿಲ್ಲ. ತಿಜೋರಿಯಲ್ಲಿ ಏನೋ ಇದೆ ಎಂದು ಊಹಿಸಿರಬಹುದಷ್ಟೇ. ಆತನಿಂದ ಕೀಲಿ ಕೈ ವಾಪಸು ಪಡೆದರೆ, ನನಗೆ ಅಪಾಯ ಕಡಿಮೆಯಾಗುತ್ತೆ. ವಜ್ರಗಳನ್ನು ಕಳವು ಮಾಡಿದ ನಂತರ ಪತ್ತೆ ಮಾಡಿದರೆ, ನನಗೆ ನಿತ್ಯವೂ ಅಪಾಯವಿದ್ದೇ ಇರುತ್ತೆ. ಹಾಗಾಗಿ, ಆದಷ್ಟು ಶೀಘ್ರ ಕೀಲಿ ಕೈ ಪತ್ತೆ ಮಾಡಿಕೊಟ್ಟರೆ ಒಳ್ಳೆಯದಿತ್ತು. ಕೀಲಿ ಕೈ ತನಿಖೆಗಾಗಿ ಬಂದಿದ್ದೆಂದು ಗೊತ್ತಾದರೆ, ತಿಜೋರಿ ಇರುವುದು, ಮತ್ತದರೊಳಗೆ ಏನೋ ಭಾರೀ ಬೆಲೆಯುಳ್ಳ ವಸ್ತುವಿದೆ ಅನ್ನುದು ಎಲ್ಲರಿಗೂ ಗೊತ್ತಾಗುತ್ತದೆ."

"ವಜ್ರವಿರುವುದು ಗೊತ್ತಾದರೆ, ನಿಮಗೆ ಸಮಸ್ಯೆ ಏನು?" ನಾನು ಕೇಳಿದೆ.

"ಏನ್ ಹೇಳ್ತೀರಿ, ಸಾರ್? ನನ್ ಮಕ್ಳು ಅದನ್ನ ಮಾರಿ, ಕುಡಿತಾರೆ! ಅದನ್ನು ಯಾರಿಗೆ ಕೊಡಬೇಕು ಅಂತ ನಾನಿನ್ನೂ ನಿಶ್ಚಯಿಸಿಲ್ಲ. ಅಷ್ಟರವರೆಗೆ, ಅವರಿಗೆ ಆ ಬಗ್ಗೆ ಗೊತ್ತಾಗಬಾರದು."

ಕರಮಚಂದ ತುಸು ಹೊತ್ತು ಯೋಚಿಸಿ, ಮರು ನುಡಿದ,

"ಆದರೆ, ತುಸು ಕಷ್ಟವಾಗಬಹುದು. ನೀವು ಮನೆಯನ್ನು ಮಾರುವ ಯೋಚನೆಯಲ್ಲಿ ಇದ್ದೀರೋ?"

"ಇಲ್ಲ! ಇಲ್ಲ!! ಯಾಕೆ?"

"ನಿಮ್ಮ ಮನೆಯನ್ನು ಕೊಳ್ಳುವ ನೆಪದಲ್ಲಿ ಬಂದರೆ ಹೇಗೆ?"

"ಹಾಂ! ನೀವು ಫೈನಾನ್ಸಿನವರು ಕಳಿಸಿದವರಂತೆ ಬರಬಹುದು!"

ಆತ ಒಂದು ಉಪಾಯ ಸೂಚಿಸಿದ. ಆತ ಮನೆ ಮತ್ತು ತೋಟದ ಮೇಲೆ ಮಲೆನಾಡು ಫೈನಾನ್ಸಿನಿಂದ ಸಾಲ ಪಡೆದಿದ್ದನಂತೆ. ಆಮೇಲೆ ಅಧಿಕ ಮಳೆಯಿಂದಾಗಿ, ಕಾಫಿ ಇಳುವರಿ ಕಡಿಮೆಯಾಗಿ, ಸಾಲ